SATYAVADI Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 29 ಸಂಚಿಕೆ 161] ಸೋಮವಾರ 4–3–46 [ಬಿಡಿ ಪ್ರತಿ 6 ಪೈ

ಸ್ತ್ರೀಹೆಣದ ಮೇಲೆ ಅತ್ಯಾಚಾರ

"ಹೆಣ ತಿನ್ನುವ ಸಾಧುಗಳು" ಎಂಬ ವರ್ತಮಾನವು ಪತ್ರಿಕೆಗಳಲ್ಲಿ ಪ್ರಕಟವಾಗಿ ಪ್ರಜೆಗಳನ್ನು ಆಶ್ಚರ್ಯಕ್ಕೀಡು ಮಾಡಿತು. ಆದರೆ ಅದಕ್ಕಿಂತಲೂ ಆತ್ಯಾಶ್ಚರ್ಯ ಕರವಾದ ವಿಷಯವನ್ನು "ಬ್ಲಿಟ್ಸ್" ಪತ್ರಿಕೆ ಪ್ರಕಟಿಸಿದೆ.

ದೂರವ್ಯಾಪ್ತಿಯ ಬ್ರಿಟಿಷ್ ಕಾಲೋನಿಯೊಂದರಲ್ಲಿ ಶ್ರೀಮಂತ ವ್ಯಾಪಾರಸ್ಥನೊಬ್ಬನು ಅಸಹನೀಯ ಕಾರ್ಯದಲ್ಲಿ ಉದ್ಯುಕ್ತನಾಗಿದ್ದುದನ್ನು ಪೋಲೀಸರು ಪತ್ತೇ ಹಚ್ಚಿದ್ದಾರೆ.

ಆತನ ವಯಸ್ಸು ಸುಮಾರು 40 ಸಂವತ್ಸರ. ಪತ್ನಿ ಪುತ್ರರಿರುವರು. ಆತನಿಗೆ ಬೇಕಾದಂತೆ ಸಂಸಾರ ನಡೆಸುವುದರಲ್ಲಿ ಇವೆಂದೋಕ್ಸಾಹಗಳು ಇರುವುದಿಲ್ಲವಂತೆ!

ಸರಿ! ಸ್ಮಶಾನ ಕಾವಲುಗಾರನ ಸಹಾಯವನ್ನು ಬೇಡಿದ! ಅವನಿಗೆ ಹಣವನ್ನು ಕೊಟ್ಟ! ಹೊಸ ಹೆಣಗಳ ಸಮಾಧಿಯನ್ನು ಅಗೆದು, ಪೆಟ್ಟಿಗೆಯಿಂದ ಹೆಣವನ್ನು ತೆಗೆಯಲು ಅತನು ಸಹಾಯ ದೊರೆಯಿತು! ಹೆಣಗಳ ಮೇಲೆಯೇ ಶ್ರೀಮಂತನ ಅತ್ಯಾಚಾರ ಪ್ರಾರಂಭವಾಯಿತು.

ಸ್ತ್ರೀಯರ ಸಮಾಧಿಗಳೇ ಕುಲಗೆಟ್ಟು ಹೋಗಲು ಕಾರಣವೇನೆಂದು ಅಲ್ಲಿಯವರಿಗೆ ಬಹಳ ಶಂಕೆಯುಂಟಾಯಿತು.

ಶ್ರೀಮಂತ ತನ್ನ ಕಾರ್ಯವನ್ನು ಸಾಗಿಸುತ್ತಲೇ ಇದ್ದನು! ಒಂದು ದಿವಸ ರಾತ್ರೆ; ಸ್ಮಶಾನದಲ್ಲಿ ಸಮಾಧಿಯನ್ನು ಅಗಿಯುತ್ತಿದ್ದುದು ಪೋಲೀಸಿನವ ನೊಬ್ಬನು ಕಂಡನು! ಕೂಡಲೇ ಅತನಿಗೆ ಭಯಾಶ್ಚರ್ಯಗಳುಂಟಾದವು. ಮುಂದೇನಾಗ ಬಹದೆಂದು ಅತನು ಕಾತುರದಿಂದ ನೋಡುತ್ತಿದ್ದನು. ಸಮಾಧಿಯನ್ನು ಅಗೆದಾದ ನಂತರ ಹೆಣವನ್ನು ಮೇಲಕ್ಕೆ ಇಳಿಸಿದರು ಸ್ತ್ರೀಹೆಣ. ಉಳಿದ ಸಹಾಯಕರೆಲ್ಲರೂ ಹೊರಟುಹೋದರು. ಶ್ರೀಮಂತ ಹೆಣದ ಮೇಲೆ ಅತ್ಯಾಚಾರವನ್ನಾರಂಭಿಸಿದನು ಕೂಡಲೇ ದಸ್ತಗಿರಿಯಾಗಿ, ಅತನಿಗೆ ಎಚ್ಚರಿಕೆಯನ್ನು ಕೊಡಲಾಯಿತು.

ಲಾಹೋರ್ ಪೌರಸಭೆಯ ಆಡಳಿತಕ್ಕೊಳಪಟ್ಟಿರುವ ಶಾಲೆಗಳ ಮುನ್ನೂರು ಉಪಾಧ್ಯಾಯುರುಗಳು ಸಂಬಳವನ್ನು ಹೆಚ್ಚಿಸಬೇಕೆಂದು ಮಾರ್ಚಿ ತಾ|| 1 ರಿಂದ ಮುಷ್ಕರ ಹೂಡಿರುವರು.

ಧಾನ್ಯಗಳ ಮೇಲೆ ನಿರ್ಬಂಧ

ಕೊಲಂಬೋ, ಮಾ 1—ಸಿಲೋನ್ ಆಹಾರ ರಕ್ಷಣ ಸಂಘದ ಬಾಂಬೇ ಕಛೇರಿಯ ವರದಿ ಪ್ರಕಾರ ಸಿಲೋನ್‌ಗೆ ಧಾನ್ಯಗಳನ್ನು ರಫ್ತು ಮಾಡಕೂಡದೆಂದು ಭಾರತ ಸರ್ಕಾರ ನಿರ್ಧರಿಸಿರುವುದೆಂದು ತಿಳಿಯ ಬಂದಿದೆ. ಸಂಘವು ತುರ್ತು ಸಭೆಸೇರಿ, ಸಿಲೋನ್ ಸ್ಥಿತಿಯನ್ನು ಗಮನಿಸಬೇಕೆಂದು ಭಾರತ ಸರ್ಕಾರಕ್ಕೆ ತಂತಿ ಮಾಡಿದೆ.

ಜುಲ್ಮಾನೆ ಇಳಿಯಿತು

ಸೇಲಂ, ಫೆ 27—ಶ್ರೀ ಎಸ್. ಕೆ ಕೃಷ್ಣಸ್ವಾಮಿ ಚೆಟ್ಟಿಯಾರ್ ಎಂಬ ಅರಿವೆಗೆ ಬಣ್ಣಹಾಕುವ ವ್ಯಾಪಾರಿಗಳು, ಸುಳ್ಳುಲೆಕ್ಕವನ್ನು ಬರೆದು ಒಣ್ಣ ಮತ್ತು ರಸಾಯನಿಕ ವಸ್ತುಗಳನ್ನು ಕಾಳಸಂತೆಯಲ್ಲಿ ಮಾರಲೋಸುಗ ಸೆಲನಾಳಿಗೆಯಲ್ಲಿ ಒಟ್ಟಿಟ್ಟಿದ್ದರೆಂದು ಅರು ತಿಂಗಳು ಸಜಾ ಮತ್ತು ರೂ 48000 ಜುಲ್ಮಾನೆಯನ್ನು ತಾ|| 23 ರ ವಿಧಿಸಿದ್ದುದನ್ನು 36000 ರೂ ಜುಲ್ಮಾನೆ ಮತ್ತು ಆರು ತಿಂಗಳು ಸಜಾಕ್ಕೆ ಇಳಿಸಿರುವರು.

ಕೂಲಿಗಾರರ ಮುಷ್ಕರ

ಧನ್‌ಬಾದ್, ಮಾ 1—ಫೋರಂಕ್ ಪ್ರದೇಶದ ನೂರಾರು ಮುಂದಿ ಕಲ್ಲಿದ್ದಲು ಗಣಿಗಳ ಕೂಲಿಗಾರರು ಈ ದಿವಸ ಕೆಲಸದಿಂದ ಹೊರಗೆ ನಿಂತರು.

ಈ ದಿವಸದಿಂದ ಕತ್ತರಿಸ ಬೇಕೆಂದಿರುವ ಶೇ|| 25 ಭಾಗ ಕೂಲಿಯನ್ನು ಕತ್ತರಿಸ ಕೂಡದೆಂದೂ, ಗಣಿಗಳಲ್ಲಿ ಹಿಂಸೆಯನ್ನು ಮಾಡಕೂಡದೆಂತಲೂ ಕೇಳಿದವರು.

ಶಾಂತಿಯಿಂದ ಕೂಡಿದ್ದ ಸಾವಿರಮಂದಿ ಕೂಲಿಗಾರರು ಧನ್‌ಬಾದ ರೈಲ್ವೆ ಸ್ಟೇಷನ್ ಒಳಸೇರಿದ್ದರು. ಗಣಿ ಅಧಿಕಾರಿಗಳು ಅವರನ್ನು ಕೆಲಸಕ್ಕೆ ಹಿಂದಿರುಗಿಸುವ ಪ್ರಯತ್ನವನ್ನು ಮಾಡಿದರು.

ಫ್ರಾಂಕೋ ಪತನವೇ!

ಫ್ರಾಂಕೋ ಪತನವೇ?

ಲಂಡನ್, ಮಾ 1— ಭದ್ರತಾ ಸಮಿತಿಯು ವಿ॥ ಫ್ರಾಂಕೋನನ್ನು ಸ್ಪೇನ್ ಅಡಳಿತ ಬಿಡುವಂತೆ ತಿಳಿಸ ಬಹುದೆಂದು ಹೇಳಲಾಗಿದೆ.

ಮಂತ್ರಿಮಂಡಲದ ನಿಯೋಗ

ಲಂಡನ್, ಮಾ 1 —ಭಾರತಕ್ಕೆ ಬರುವ ಬ್ರಿಟಿಷ್ ಮಂತ್ರಿಮಂಡಲದ ನಿಯೋಗವು ಕರ್ತಾರುಗಳ ಮಾದರಿಯನ್ನು ತರುವುದೆಂದು ಹೇಳಲಾಗಿದೆ.

೨ ಮಿಲಿಯ ಧಾನ್ಯ ಬೇಕು

ನ್ಯೂಯಾರ್ಕ್, ಮಾ 1— 2 ಮಿಲಿಯಟನ್ ಧಾನ್ಯಗಳು ಭಾರತಕ್ಕೆ 4 ತಿಂಗಳೊಳಗೆ ದೊರೆಯದಿದ್ದರೆ, 1943 ರಲ್ಲಾದ ಮತ್ತು 1 ಮಿಲಿಯಜನರು ಅಹುತಿಯಾದ ಕ್ಷಾಮಕ್ಕಿಂತ ಭೀಕರ ಕ್ಷಾಮ ಪ್ರಾಪ್ತವಾಗುವುದೆಂದು ಸರ್ ರಾಮಸ್ವಾಮಿ ಮೊದಲಿಯಾರರು ಹೇಳಿದರು.

ತಪ್ಪು—ಅಮೇರಿಕಾ

ನ್ಯೂಯಾರ್ಕ್, ಮಾ 1—ಪೋರ್ಟ್ ಆರ್ಥರ್ ಭಾಗದಲ್ಲಿ ರಷ್ಯಾ ವಿಮಾನಗಳು ಯು. ಎಸ್. ವಿಮಾನಗಳ ಮೇಲೆ ಗುಂಡುಹಾರಿಸಿದರೆಂದೂ, ಈ ಸಂದರ್ಭದಲ್ಲಿ ಎರಡು ಸರ್ಕಾರಕ್ಕೂ ಪತ್ರವ್ಯವಹಾರ ನಡೆಯುತ್ತಿರುವುದೆಂದೂ ಹೇಳಲಾಗಿದೆ

ಕಂಚಿಯಲ್ಲಿ ಗೋಳೀಬಾರು

ಕಂಚಿ, ಮಾ 2— ಪ್ರಂಡೆರ ಗಾಂವ್ಕೋಂದು ರೇಷನಿಂಗ್ ಆಫೀಸಿನ ಮೇಲೆ ಧಾಳಿ ನಡೆಸಲು ನಗ್ನೆದರು. ಪೋಲೀಸರು ಲಾಠೀ ಛಾರ್ಜ್ ಮಾಡಿದರು. ಗಲಭೆ ಕಡವೆಯಾಗದಿದ್ದುದರಿಂದ ಪೋಲೀಸರು ಗುಂಡುಹಾರಿಸಿದರು. ಕೆಲವರಿಗೆ ಗಾಯವಾಯಿತು. ಈಗ ಪರಸ್ಥಿತಿ ಶಾಂತವಾಗಿದೆ.

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಯರಿಂದ)

ಮೇಷ— ಶಾರೀರಿಕ ಸಾಂಪತ್ತಿಕ ಸ್ಥಿತಿಗಳು ಉತ್ತಮವಾಗಿರುತ್ತವೆ. ವ್ಯವಹಾರದಲ್ಲಿ ಕಷ್ಟಗಳು ಬಂದೊದಗುವುವು.

ವೃಷಭ— ಯಾವ ಕೆಲಸ ಕಾರ್ಯ ಮಾಡಲೂ ಉತ್ಸಾಹವಿರುವುದಿಲ್ಲ. ಮನಸವು ಚಿಂತೆಯಲ್ಲಿ ಮಗ್ನವಾಗಿರುತ್ತದೆ. ಚಿತ್ತೈಕಾಗ್ರತೆಯುಳ್ಳವರಿಗೆ ಯಾವ ಭಯವೂ ಇರುವುದಿಲ್ಲ.

ಮಿಥುನ— ಮನಸ್ಸಿಗೆ ಅಶಾಂತಿಯುರುತ್ತದೆ. ಆರೋಗ್ಯಕ್ಕೆ ಭಂಗಬರುತ್ತದೆ. ಸಾಂಪತ್ತಿಕ ಮುಗ್ಗಟ್ಟು ಕೂಡ ಕಾಣಬರುತ್ತದೆ.

ಕರ್ಕಾಟಕ— ಕೈಗೊಂಡ ಕಾರ್ಯಗಳು ಕೈಗೂಡುವುದಿಲ್ಲ, ಮಾನಸಿಕ ಕ್ಲೇಶ ವುಂಟು ಆರ್ಥಿಕ ಮುಗ್ಗಟ್ಟುವುಂಟು.

ಸಿಂಹ— ಆರೋಗ್ಯಲಾಭ, ಧನಲಾಭ, ವ್ಯವಹಾರದಲ್ಲಿ ವಿಜಯಗಳುಂಟು, ಮಾನಸವು ಆನಂದವಾಗಿರುತ್ತವೆ.

ಕನ್ಯಾ— ಶಾರೀರಿಕ, ಸಾಂಪತ್ತಿಕ ಮಾನಸಿಕ, ವ್ಯವಹಾರಿಕ, ವಿಷಯಗಳು ಉತ್ತಮದಲ್ಲಿರುತ್ತವೆ.

ತುಲಾ— ಆರೋಗ್ಯಲಾಭ ಧನಲಾಭ, ಯಶೋಲಾಭಗಳುಂಟು, ಮನಸ್ಸು ಪ್ರಸನ್ನವಾಗಿರುತ್ತದೆ.

ವೃಶ್ಚಿಕ— ಮನಸ್ಸು ಚೆನ್ನಾಗಿರುವುದಿಲ್ಲ. ದೇಹಸ್ಥಿತಿಯು ನಟ್ಟಗಿರುವುದಿಲ್ಲ. ವ್ಯವಹಾರದಲ್ಲಿ ಕಷ್ಟವುಂಟು. ಮನಸ್ಸು ಹರ್ಷವಾಗಿರುವುದಿಲ್ಲ.

ಧನುಸ್ಸು— ಅಶಾಂತಿಯು ಹೆಚ್ಚುವುದು. ಆರ್ಥಿಕ ಲಾಭ ಕಡಿಮೆ, ವ್ಯವಹಾರದಲ್ಲಿ ಕ್ಲೇಶನಿರುತ್ತದೆ.

ಮಕರ— ಶಾರೀರಿಕ, ಸಾಂಪತ್ತಿಕ, ಮಾನಸಿಕ ಸ್ಥಿತಿಗಳು ಉತ್ತಮವಿರುತ್ತವೆ. ವ್ಯವಹಾರದಲ್ಲಿ ಜಯ ಪ್ರಾಪ್ತಿಯಾಗುವುದು.

ಕುಂಭ— ಆದಾಯಕ್ಕಿಂತ ವ್ಯಯವು ಹೆಚ್ಚುವುದು. ಮಿಕ್ಕ ವಿಷಯಗಳಲ್ಲಿ ಯಾವ ಕಷ್ಟವೂ ಇರುವುದಿಲ್ಲ.

ಮೀನ— ಖರ್ಚು ಹೆಚ್ಚು ಶಾರೀರಿಕ ಸ್ಥಿತಿ ಉತ್ತಮವಿರುವುದಿಲ್ಲ. ವ್ಯವಹಾರದಲ್ಲಿ ಹೆಚ್ಚು ಶರೀರಕ್ಕೆ ಕಷ್ಟ ಕೊಡಬೇಕಾಗುತ್ತದೆ

ಚೀನಾದಲ್ಲಿ ಮೂರು ವರ್ಷಗಳಲ್ಲಿ ರಿಕ್ಷಾಗಾಡಿಗಳ ಉಪಯೋಗವನ್ನು ಹೋಗ ಲಾಡಿಸುವುದಾಗಿ, ವಾರ್ತಾ ಮಂತ್ರಿ ಡಾ|| ಕೆ. ವು. ತಿಳಿಸಿದ್ದಾರೆ.

ವಿವಿಧ ವರ್ತಮಾನ

ನವದೆಹಲಿ, ಫೆ 28 — ' ಸೇನಾ ನ್ವೇಷಣ ಕಾರ್ಯಾಲಯ ಮುಂಡೆ ಖಾಗು ವುದು ಇಂಡೋನೇಷಿಯಾ ರಾಷ್ಟ್ರೀಯ ಧುಗಳ ಚಳುವಳಿಯನ್ನು ತುಳಯುವ ಸ ಲುವಾಗಿಯೇ ? ' ಎಂಬುದಾಗಿ ಕಾಂ ಗ್ರೆಸ್ ಪಕ್ಷದ ಶ್ರೀ ತಿರುಮಲರಾಯರು ಮುಂಡಿಸಿದ ನಿಲುವಳಿ ಸೂಚನೆಗೆ, ಭಾರ ತದ ಮಹಾ ಸೇನಾನಿ ಸರ್ ಕ್ಲಾಡ್ ಆ ಕಿನ್‌ಲೇಕರು ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ಹೇಳುತ್ತಾ ' ನಾಳೆಯ ದಿವಸದಿಂದ ಭಾ ರತ ಸೇನೆಗಳು ಇಂಡೋನೇಷಿಯಾದಿಂ ಭಾರತಕ್ಕೆ ವಾಪಸಾಗುವುದು ' ಎಂಬು ದಾಗಿ ತಿಳಿಸಿರುವರು.

ಂ ಂ

ಶ್ರೀಮನ್ಮಾಹಾರಾಜರು ಮಿತ ಪರಿ ವಾರದೊಡನೆ ಆಲಗೋಡನ ಗ್ರಾಮದ ಬಳಿ ಅನಿರೀಕ್ಷಿತ ಭೇಟಿಯಿತ್ತು ಲಾರಿ ಯಲ್ಲಿ ತಂದಿದ್ದ ಆಹಾರವನ್ನು ಸ.ಮಾ ರು 150 ಜನರಿಗೆ ಹಂಚಿಸಿದರೆಂದೂ ಪ್ರ ಜೆಕಷ್ಟ ಸುಖಗಳನ್ನು ಕೇಳಿದರೆಂದುತಿಳಿ ಯಬಂದಿದೆ.

ಂ ಂ

ಅಮೇರಿಕಾದಲ್ಲಿ ಮುಷ್ಕರವು ಕುದು ರೆಜೂಜಿನವರೆಗೂ ಹರಡಿದೆ. ಸಾಂಟ ಅಲೀಟಾದಲ್ಲಿ ಜೂಜಿನ ಬೋರೆಯವರು ಗೆದ್ದ ಕುದುರೆಗೆ ಬಂದ ಹಣದಲ್ಲಿ ಮೊ ಲೀಕನು ಈ ಕುದುರೆ ಮಾಲೀಸು ಮಾ ಡುವವನು ಆಡಿಸುವ ಹುಡುಗರು ಎಲ್ಲರಿ ಒಂದು ಭಾಗ ಹಂಚಬೇಕೆಂದು ತೀರ್ಮಾ ನಿಸಿರುವರು. ಇದಕ್ಕೆ ಮಾಲೀಕನು ಕು ದುರೆಯನ್ನು ಜೂಜಿಗೆ ಬಿಡದೆ ಮುಷ್ಕರ ಹಿಡಿಯುವುದಾಗಿ ಬೆದರಿಸುತ್ತಿರುವರು.

ಂ ಂ

ಕಳೆದ ಮಾಹೆ ತಾ || 27 ರಲ್ಲಿ ತು ಮಕೂರಿನಲ್ಲಿ ಸಂಜೆ ಹೊತ್ತಿನಲ್ಲಿ ಸು ಮಾರು 60 ಮಂದಿಪೋಲಿಸ್ ಕಾನ್ಸ್ಟೆಬ ಲ್‌ಗಳು ಮುಷ್ಕರ ಹಿಡಿದಿದ್ದರೆಂದೂ ಜಿ ಲ್ಲಾಧಿಕಾರಿಗಳು ಪರೀಕ್ಷಿಸಿದಸಂತರ ನಿ ಲ್ಲಿಸಿದರೆಂದೂ ತಿಳಿಯಬಂದಿದೆ.

ಂ ಂ

ಗಾಂಧೀಜಿ, ಆಗಾಖಾನ್ ಮತ್ತು ಭೂಪಾಲ ನವಾಬರೊಳಗೆ ನಡೆದ ಮಾ ತುಕತೆಗಳನ್ನು ಕುರಿತು ಮಾಜಿ ಫಾರ್ವ ರ್ಡ್ ಬ್ಲಾಕಿನ ಅಧ್ಯಕ್ಷ ಸರ್ದಾರ್ ಶಾ ರ್ದೂಲಸಿಂಗ್ ಕವೀಶರು ಕಾಂಗ್ರೆಸ್ ಪ್ರಾಕೀಸ್ಥಾನಕ್ಕೆ ಒಪ್ಪಬಹುದೆಂಬ ಹೆದ ಕೆಯಿದೆ ಯೆಂದಿರುವರು.

ಲಾಹೋರ್, ಫೆ 27 — ಆ ಜಾ ದ್ ಹಿಂದ್ ಫೌಜಿನ ಕ್ಯಾ || ಬರ್ಹನುದ್ದೀಗೆ 7 ವರ್ಷಗಳ ಕಠಿಣ ಶಿಕ್ಷೆಯ ವಿಧಿಸಿರುವುದನ್ನು ಪ್ರತಿಭಟಿಸಲು ಲಾ ಹೋರ್ ವಿದ್ಯಾರ್ಥಿಗಳು ಪ್ರದರ್ಶನ ನ ಡೆಸಿದರು. ಈ ಸಂದರ್ಭದಲ್ಲಿ ಗವ ರ್ನರ ಕಾರಿಗೆ ಏಟುಬಿದ್ದಿದೆ.

ಂ ಂ

ಜಬ್ಬಲ್ಪುರದಲ್ಲೂ ಸಹಾ ಮುನ್ನೂ ರು ಮಂದಿ ಸಿಪಾಯಿಗಳು ಕ್ಯಾ || ಬ ರ್ಹನುದ್ದೀಗೆ ವಿಧಿಸಿರುವ ಶಿ ಕ್ಷೆ ಯ ನ್ನು ಖಂಡಿಸಿ ಮುಷ್ಕರ ಹೂಡಿರುವರು.

ತಪ್ಪು ಯಾರದು ?

(1) ನಾಗಪುರದಲ್ಲಿ ಕಾಂಗ್ರೆಸ್ ಪಾರ್ಲಿಮೆಂಟರಿ ತೀರ್ಮಾನವನ್ನು ಪ್ರತಿ ಭಟಿಸಿ ಜ || ಅನಲೆಯವರ ಮಾಡುತ್ತಿ ರುವ ಉಪವಾಸವನ್ನು ಮಹಾತ್ಮ ಗಾಂ ಧೀಜೀಯವರು ಖಂಡಿಸಿ ಅದು ತಪ್ಪೆಂ ದು ಅವರು ಸತ್ತರೆ ಪಶ್ಚಾತ್ತಾಪವೂಕೂಡ ದೆಂದು ಹೇಳಿದ್ದರು.

(2) ಜ || ಅನೆಯವರು ಉತ್ತರ ವಾಗಿ ಗಾಂಧೀಜೀಯವರ ಬ್ರಿಟಿಷ್ ಸರ್ಕಾರದಂತೆ ಹೇಳಿರುವರೆಂತೂ ಗಾಂ ಧೀಜಿ ಉಪವಾಸ ಮಾಡಲು ಹೊಂಬಾಗ ಬ್ರಿಟಿಷ್ ಸರ್ಕಾರ ಎಸು ಹೇಳುತ್ತಿತ್ತೊ ಹಾಗೆ ಗಾಂಧೀಜಿ ತಸ್ಸ ವಿಷಯದಲ್ಲಿ ಹೇಳಿರುವರು ಎಂದಿಯಮು.

ದೆಹಲಿಯ ಕೇಂದ್ರ ಶಾಸನ ಸಭೆ ಯ ಬಜೆ ಪ್ರಕಾರ ಸಕ್ಕರೆ ಬಿಣ್ಣೆ ಮೊ ದಲಾದುವುಗಳ ರಫ್ತು ನಿಲ್ಲುವುದೆಂದು ತಿ ಳಿಯಬಂದಿದೆ.

ಂ ಂ

ಮದರಾಸು, ಫೆ 28 — ಮದರಾ ಸು ಶಾಸನ ಸಭೆಯಲ್ಲಿ ವಿಶ್ವವಿದ್ಯಾನಿಲ ಯದ ಸ್ಥಾನಕ್ಕೆ ಕಾಂಗ್ರೆಸಿನ ಪರ ಶ್ರೀ ಕೆ. ಭಾಷ್ಯಂ ನಿಲ್ಲಿಸಲ್ಪಟ್ಟಿದ್ದಾರೆ. ಈ ಸ್ಥಾನಕ್ಕೆ ನಿಲ್ಲಿಸಲ್ಪಟ್ಟಿದ್ದ ರಾಜಾಜಿಯ ವರು ಕಾಂಜ್ಞಾಂತರದಿಂದ ವಾಪಸಾದರು

ಂ ಂ

ಮೈಸೂರು ಕರಂಗ್ರೆಸ್ ಅಧಿವೇಶನ ವನ್ನು ಹಾಸನದಲ್ಲಿ ನಡೆಸಲು ತೀರ್ಮಾ ನಿಸಲಾಗಿದೆಯೆಂದೂ, ಖಾದಿ ಕೈಗಾ ರಿಕೆ ವಸ್ತು ಪ್ರದರ್ಶನವನ್ನೇರ್ಪಡಿಸಿ ಸರದಾರ ಪಟೇಲರಿಂದ ಆರಂಭೋತ್ಸವ ನೆರವೇರಿಸಲು ತೀರ್ಮಾನವಾಗಿದೆಯೆಂ ದೂ ತಿಳಿಯಬಂದಿದೆ.

ಂ ಂ

ಮೈಸೂರು 1945 ನೇ ರಬ್ಬರ್ ಮ್ಯಾನ್ಯುಫ್ಯಾಕ್ಚರರ್ಸ್ ಕಂಟ್ರೋಲ್ ಆರ್ಡರ್ ರದ್ದುಪಡಿಸ ಲಾಗಿರುವುದೆಂದು ಸರಕಾರಿ ಪಬ್ಲಿಸಿಟಿ ಆಫೀಸರು ಒಂದು ಪ್ರೆಸ್ ನೋಟನ್ನು ಹೊರಡಿಸಿದ್ದಾರೆ.

ಕಮ್ಯಾಂಡರ್ ಇನ್ ಛೀಫ್‌ರವರು

' ಹಂಗಂ ಪೋಸ್ಟ್‌ಮ್ಯಾನ್ ಎಂ ಪ್ಲಾಯಿ ' ಎಂಬುದಾಗಿ ಭಾರತದ ಎಲ್ಲಾ ಆಂಜೆ ಮತ್ತು ತಂತಿ ನೌಕರುಗಳು ಬ್ಯಾ ಡ್ಜ್‌ಗಳನ್ನು ಹಾಕಿಕೊಂಡಿರುವರು. ಬ ರುವ ತಿಂಗಳು ತಾರೀಖು 11 ರಿಂದ ಆ ರಂಭವಾಗಲಿರುವ ಆಂಜೆ ಮತ್ತು ತಂ ತಿ ನೌಕರರುಗಳ ಮಹಾ ಮುಷ್ಕರಕ್ಕೆ ಈ ಗುರುತೇ ಸೂಚನೆಯೆಂದು ತಿಳಿಯು ಬಂದಿದೆ. ಮೈಸೂರಿನಲ್ಲಿಯಾ ಆಂಜೆ ಮತ್ತು ತಂತಿ ನೌಕರುಗಳು ಈ ಗುರು ತನ್ನು ತಮ್ಮ ಅಂಗಿಯ ಮೇಲೆ ಧರಿಸಿ ರುವರು.

ಂ ಂ

ಲಕ್ನೋದಲ್ಲಿ ಚುನಾವಣಾ ಸಂಬಂ ಧದ ಭಾಷಣದಲ್ಲಿ ಕಾಂಗ್ರೆಸ್ಸಿನವರು ಜಮೀನ್ದಾರಿಗಳನ್ನು ತೊಡೆದುಹಾಕಲು ಯತ್ನಿಸಿದರೆ, ತಾಲ್ಲೂಕ್‌ದಾರರೆಲ್ಲಾ ಭಾರಿ ಗಲಭೆ ನಡೆಸುವರೆಂಬ ಮಹಮ ದಾಬಾದು ರಾಜರು ಹೇಳಿದರು. ಮತ್ತೆ ಕೆಲವರು ಜಮೀನ್ದಾರಿಗಳನ್ನು ಉಳಸಿ ಕೊಳ್ಳಲು ತಮ್ಮ ಪ್ರಾಣವನ್ನು ಕಳೆದು ಕೊಳ್ಳಲೂ ಸಿದ್ಧರಾಗಿರುವೆವೆಂದರು.

ಂ ಂ

ನವದೆಹಲಿ, ಫೆ 27 — ಮಾರ್ಚ್ ತಿಂಗಳ ಕಡೆಯೊಳಗೆ ಆಸ್ಟ್ರೇಲಿಯಾ ರೇವುಗಳಲ್ಲಿ ಹಡಗುಗಳಿಗೆ 150000 ಟ್ ಗೋಧಿಯು ತುಂಬಿಲ್ಪಟ್ಟು ಅವು ಭಾರತ ಕ್ಕೆ ಬರುವುವು.

ಂ ಂ

ನವದೆಹಲಿ, ಫೆ 28 — ಪೆಟ್ರೋಲು ಮತ್ತು ಸೀಮೆಎಣ್ಣೆ ಬೆಲೆ ಮೇಲೆ ಸುಂ ಕ ಇಳಿಸಲ್ಪಟ್ಟಿರುವ ವಿಷಯವನ್ನು ಹಣ ಕಾಸಿನ ಸದಸ್ಯರು ತಿಳಿಸಿದರು

ಂ ಂ

ಲಂಡನ್ ಫೆ 26— ಬೊಂಬಾಯಿನಲ್ಲಿ ನಡೆದ ಘಟನೆಗಳು ನಮ್ಮನ್ನು ಎಚ್ಚರ ಗೊಳಿಸುತ್ತವೆ. ಮಂತ್ರಿ ಮಂಡಲದ 2 ಮಂದಿ ಕೂಡಲೇ ಭಾರತಕ್ಕೆ ಹೋಗಿ ಅಧಿಕಾರವನ್ನು ಪ್ರಜೆಗಳು ನಂಬಿಕೆಯಿಟ್ಟಿರುವ ಮುಖಂಡರಿಗೆ ವ ರ್ಗಾಯಿಸಬೇಕೆಂದು ಫೆನ್ನರ್ ಬ್ರಾಕ್ವೆ ಯವರು ಹೇಳಿದಾರೆ.

ಂ ಂ

ಸ್ಪೇನಲ್ಲಿ ಫ್ರಾಂಕೋ ಪ್ರಭುತ್ವವನ್ನು ಉರುಳಿಸಬೇಕಾದರೆ ಏನು ಮಾಡ ಬೇಕೆಂದು ಸಲಹೆ ಕೇಳಿ ಅಮೇರಿಕದಿಂದ ಬ್ರಿಟನ್ನಿಗೆ ಕಾಗದ ಬಂದಿದೆ. ಫ್ರೆಂಚ್ ರ ತೀರ್ಮಾನವನ್ನು ಕೇಳಿ ಸ್ಪೇನ್ ಫ್ರಾ ನ್ಸಿನ ಗಡಿಯನ್ನು ಬಂದುಮಾಡಿತು.

ವಿವಿಧ ವರ್ತಮಾನ

ಲಕ್ನೋದಿಂದ ಮೂಢ ನಂಬಿಕೆಯ ಕಥೆಯೊಂದು ಬಂದಿದೆ ಬೆಳಿಗ್ಗೆ ಗೋವಿಂದ ವಲ್ಲಭ ಪಂತರು ಗೌರ್ನರರನ್ನು ಭೇಟಿ ಮಯಡಿದರು ಸಂಜೆ ಮಳೆ ಬಂತು- ಈ ಭೇಟಿಯು ಫಲವೇ ಮಳೆ ಎಂದರು ಜನ- ಈ ವಿಚಾರವನ್ನು ಲಕ್ನೋ ಮೂಲಕ ಪ್ರಯಾಣ ಮಾಡಿದ ನೆಹರೂ ರವರಿಗೆ ತಿಳಿಸಿದಾಗ ಅವರು ನಕ್ಕು ತಮ್ಮನ್ನೂ ಸಹ ಜನ ವಿಚಿತ್ರಾಯುರನ್ನು ಕರೆಸುವ ಶಕ್ತಿಯುಳ್ಳವನೆಂದು ಭಾವಿಸಿರುವ ವಿಚಾರವಾಗಿ ಕತೆ ಹೇಳಿದರು. ಅವರು ಘಾರವಾಲಕ್ಕೆ ಹೋದ ದಿನ ಅಲ್ಲಿ ಒಳ್ಳೇ ಮಳೆ ಬಿತ್ತಂತೆ. ಮತ್ತೂ ಒಂದು ಕತೆ ಹೇಳಿದರು. ಕಳೆದ ವರ್ಷ ಸಿವ್ಹಾದಲ್ಲಿ ಕಾಂಗ್ರೆಸ್ ನಾಯಕರು ಮೈಸಂಖ್ಯಾದನ್ನು ಭೇಟಿಮಾಡಿದ ಕಾಲದಲ್ಲಿ ಮೂರು ವರ್ಷಗಳಿಂದ ಬಾರದಂಥ ಮಳೆ ಆಗ ಬಂತಂತೆ. ಬೆಟ್ಟ ಗುಡ್ಡಗಳೆಲ್ಲಾ ಆಗ ಹಚ್ಚಗಾಯಿತೆಂದರು ನೆಹರು. (ತಾ)

ಜಾವಾ ಸಂಧಾನ ಪ್ರಯತ್ನದಲ್ಲಿ ಬ್ರಿಟಿಷ್ ವಿಶೇಷ ರಾಯಭಾರಿಯು ಪ್ರಧಾನ ಪಾತ್ರವಹಿಸುವನು.

ಬೊಂಬಾಯಿ, ಕಲ್ಕತ್ತಾ ಕರಾಚಿ ಪ್ರಕರಣಗಳನ್ನು ಕುರಿತು ಜಿನ್ನಾ ಸಾಹೇಬರು ಸರ್ಕಾರದ ಕ್ರಮವನ್ನು ತೀವ್ರವಾಗಿ ಖಂಡಿಸಿರುವರು

ಯಾಲ್ಟ ಅಂತರ್ಯ ಒಪ್ಪಂದಕ್ಕೆ ತಮ್ಮ ಅಂಗೀಕಾರವಿಲ್ಲವೆಂದು ಚೀಣೀ ರಾಜಕಾರಿಣಿಗಳು ಸ್ಪಷ್ಟಪಡಿಸಿ ಚೀಣದ ವಿದೇಶವನ್ನು ವ್ಯಕ್ತಪಡಿಸಿರುವರು.

ಯಾವ ರೀತಿಯ ಪ್ರದರ್ಶನಗಳನ್ನು ಕೈರೋವಿನಲ್ಲಿ ನಡೆಸಕೂಡದೆಂದು ಈಜಿಪ್ಟಿನ ಪ್ರಧಾನಿ ತಿಳಿಸಿರುವನು.

ಬೊಂಬಾಯಿ, ಫೆ 25 — ಮೂರು ದಿನಗಳ ಲೂಟಿ ಗಲಭೆ ಮಿಲಿಟರಿ ಗೋಳಬಾರು ಕಳೆದು ಇಂದು ಬೊಂಬಾಯಿ ಶಾಂತವಾಗಿದೆ 270 ಸಾವು ಸಾವಿರ ಗಾಯವು ಆಗಿದೆ ಐದು ಲಕ್ಷ ಟನ್ನು ಧಾನ್ಯ ಮತ್ತು ಒಂದೂಕಾಲು ಲಕ್ಷ ಟನ್ನು ಸಕ್ಕರೆ ಹಾಳಾಗಿದೆ

ನೂರೆಂಬರ್ಗ್, ಫೆ 26 — ರಿಬ್ಬೆಂಟ್ರಾಪನು ತನ್ನ ಪದ ಚರ್ಚಿಲರನ್ನು ಸಾಕ್ಷಿಯಾಗಿ ಕೋರಿದ್ದಾನೆ

ವೃತ್ತಾಂತ ಸಂಗ್ರಹ

ಸ್ಪೇನಿನಲ್ಲಿ 11 ಮಂದಿ ರಿಪಬ್ಲಿಕನ್ನರಿಗೆ ಮರಣ ದಂಡನೆ ವಿಧಿಸಿದ್ದರಿಂದ, ಫ್ರಾನ್ಸಿಸವರು ಸ್ಪೇನ್ ಕಡೆಯ ತಮ್ಮ ಗಡಿಯನ್ನು ಬಂದು ಮಾಡಿದ್ದಾರೆ.

ಕಲ್ಲಿಕೋಟಿ, ಫೆ 26 — ಕೊಬ್ಬರಿ ಎಣ್ಣೆ, ಕೊಬ್ಬರಿ ಮತ್ತು ತೆಂಗಿನ ಕಾಯಿ ಬೆಲೆ ಸ್ವಲ್ಪ ಇಳಿದಿದೆ.

ಬೊಂಬಾಯಿ, ಫೆ 27 — ನಾವಿಕ ಮುಷ್ಕರಕಾರರ ಪೈಕಿ 84 ಮಂದಿಯನ್ನು ಯಾವುದೋ ಗೊತ್ತಿಲ್ಲದ ಸ್ಥಳಕ್ಕೆ ಒಯ್ಯಲಾಗಿದೆ.

ಮದರಾಸು ಫೆ 27— ನಗರವು ಶಾಂತಿಯಿಂದಿದ್ದು ಕಾರ್ಯಕಲಾಪಗಳು ಎಂದಿನಂತೆ ನಡೆಯುತ್ತಿದೆ.

ನವದೆಹಲಿ, ಫೆ 26 — ಆಲ್ ಇಂಡಿಯಾ ಪೋಸ್ಟಮೇನ್ ಮತ್ತು ಲೋವರ್‌ಗ್ರೇಡ್ ಸ್ಟಾಫ್ ಯೂನಿಯನ್ನಲ್ಲಿ ಒಂದು ಲಕ್ಷ ಮಂದಿ ಸದಸ್ಯರಿರುವರೆಂದೂ ಮಾರ್ಚಿ 5 ರೊಳಗೆ ಇವರ ಕೇಳಿಕೆಗಳು ವ್ಯವಸ್ಥೆಯಾಗದಿದ್ದಲ್ಲಿ ಮಾರ್ಚಿ 11 ರಿಂದ ಇವರು ಮುಷ್ಕರ ಹಿಡಿಯುವರೆಂದು ಜ॥ ಸೆಕ್ರಟರಿಯವರ ಹೇಳಿಕೆಯಾಗಿದೆ.

ಮಧ್ಯ ಭಾರತದ ಒಂಡು ಕ್ಯಾಂಪಿನಿಂದ ಜಪಾನೀ ಖೈದಿಗಳು ಗಲಭೆ ಮಾಡಿ ತಪ್ಪಿಸಿಕೊಂಡುಹೋಗಲು ಪ್ರಯತ್ನಿಸಿದರೆಂದುಹೇಳಲಾಗಿದೆ.

ಬೆಂಗಳೂರು ಫೆ 26— ಇನ್ನು ಮೇಲೆ ಸಂಸ್ಥಾನದಿಂದ ಹೊರಕ್ಕೆ ಸರ್ಕಾರದ ಅಸ್ಪಣೆಯಿಲ್ಲದೆ ಯಾನ ಕಾಳನ್ನೂ ಕಳಿಸಕೂಡದೆಂದು ಆಜ್ಞೆಯಾಗಿದೆ.

ನಾಯಿಯ ರಾಜ್ಯಭಾರ

ಅಬ್ಸೀನಿಯಾ ದೇಶಕ್ಕೆ ಮೂರು ಸಾವಿರ ವರ್ಷಗಳ ಹಿಂದೆ ನಾಯಿಯೇ ರಾಜನಾಗಿರುತ್ತಿತ್ತಂತೆ. ಪರಿಪಾಲನೆಗೆ ಸಂಬಂಧಪಟ್ಟ ಕಾಗದಗಳನ್ನು ಆ ಶುನಕ ರಾಜರಿಗೆ ಓದಿ ಹೇಳಿದಾಗ ಅದು ಬಾಲನನ್ನು ಆಲ್ಲಾಡಿಸಿದಲ್ಲಿ ಮಂಜೂರು ಆಯಿತೆಂದೂ 'ಬೌ' ಎಂದು ಬೊಗಳಿದರೆ ಮಂಜೂರು ಆಗಲಿಲ್ಲವೆಂದೂ ನಿರ್ಣಯಿಸುತ್ತಿದ್ದರಂತೆ;

ವೈದೀಕಿಜಂ ಪ್ರತಿಕಾರ

ಗಾಂಧೀಜೀಯವರು

ದಕ್ಷಿಣ ಹಿಂದೂಸ್ಥಾನದಲ್ಲಿ ಕಾಂಗ್ರೆಸ್ ವಿರುದ್ಧ ಒಂಡು ಹೂಡಿ ಮುಖಂಡತ್ವವನ್ನು ಕಳೆದುಕೊಂಡು ಜನತೆಯಿಂದ ಸ್ಥಾನಭ್ರಷ್ಟತ್ವವನ್ನು ಹೊಂದಿದ್ದ ಮತ್ತು ರಕ್ತಸಂಬಂಧ ತಮ್ಮ ಬಂಧುಗಳಾಗಿರುವ ರಾಜಾಜಿಯವರನ್ನು ದಕ್ಷಿಣ ಭಾರತೀಯರ ವಿರುದ್ಧವಾಗಿ ತಿರಿಗಿ ಮುಖಂಡರನ್ನಾಗಿ ನೂಡಿದ ಗಾಂಧೀಜೀಯವರ ವಾಪಸು ಮುಂಬೈಗೆ ಹೋದ್ದಕೂಡಲೇ ರಾಜಾಜಿಯ ವರಂತೆ ಕಾಂಗ್ರೆಸ್ಸಿಗೆ ರಾಜೀನಾಮೆ ಕೊಟ್ಟಿದ್ದ ಶ್ರೀ ಕೆ. ಎಂ. ಮುನಷಿಯವರನ್ನು ತಮ್ಮ ಒಳಿಗೆ ಕರೆಸಿಕೊಂಡ ತಿಂಗಳೇ ಕಾಂಗ್ರೆಸ್ ಧುರೀಣತ್ವವನ್ನು ವಹಿಸಬೇಕೆಂದು ಕೇಳಿದರೆಂತಲೂ ಅದಕ್ಕೆ ಅವರು ಒಪ್ಪಿಕೊಂಡಿರುವರೆಂತಲೂ ವದಿಯಾಗಿದೆ

ಪಾಪ! ಭೂಲಾಭಾಯಿ ದೇಶಾಯಿಯವರು ಸಿಮ್ಲಾ ಕಾಂಗ್ರೆಸ್ಸಿಗರಾಗಿದ್ದು ವೈಸ್ರಾಯರವರ ಸಂಗಡ ಸಂಧಾನ ನಡೆಸಿ ಕಾಂಗ್ರೆಸ್ಸು ಹೈಕಮಾಂಡಿನ ಜನರನ್ನು ಮತ್ತು ಇತರ ಕಾಂಗ್ರೆಸ್ಸಿಗರನ್ನು ಜೈಲಿನಿಂದ ಬಿಡುಗಡೆ ಮಾಡಿದರು. ಫಲತ್ತು ತಮ್ಮ ಅಮೂಲ್ಯ ವೇಳೆಯನ್ನು ಉಪಯೋಗಿಸಿ ಆಜಾದಫೌಜಿನ 3 ಮಂದಿ ಸೇನಾನಾಯಕರನ್ನು ಮೃತ್ಯು ಮುಖದಿಂದ ಉಳಿಸಿಕೊಂಡರು. ಇಂಥವರನ್ನು ಕಾಂಗ್ರೆಸ್ಸು ಹೈಕಮಾಂಡು 'ಕ್ಲಿಕ್' ಮೂಲಿಗೆ-ಕೂಳ್ಳಿರಿಸಿ ಬಿಟ್ಟಿತು. ತಾವಲ್ಲರು ಜೈಲಿನಲ್ಲಿದ್ದಾಗ್ಗೆ ತಿಮ್ಮ ಅನುಮತಿಯನ್ನ ತೆಗೆದುಕೊಳ್ಳದೆ ಕಾಂಗ್ರೆಸ್ಸು ಹೆಸರಿನಲ್ಲಿ ಲೀಗ್ ಸಂಗಡ ಸಂಧಾನ ಮಾಡಿದ್ದೇ ಭೂಲಾಭಾಯಿಯವರ ದೊಡ್ಡ ಅಪರಾಧವಾಗಿ ಪರಿಗಣಿಸಲ್ಪಟ್ಟಿದೆ. ನಿಜ ಸಂಗತಿಯೇನೆಂದರೆ ಸೂಪರ್ ಹಿಟ್ಲರೆಂದು ಘೋಷಿಸಿದ ವಲ್ಲಭಾಯಿ ಪಟೇಲರಿಗೆ ಪ್ರತಿಸ್ಪರ್ಧಿಯಾಗುವ ಇರಕೂಡದೆಂತಲೇ ದಿನದಿನವೂ ಪ್ರಜಾ ಸ್ಫೀತಿಯನ್ನು ಸಂಪಾದಿಸುತ್ತಲಿದ್ದ ಭೂಲಾಭಾಯಿಯವರನ್ನು ಮೂಲೆಗೆ ಕುಳ್ಳಿರಿಸಿದರು.

ರಷ್ಯಾ ಟರ್ಕಿ ಯುದ್ಧವೇ?

ನ್ಯೂಯಾರ್ಕ್ ಫೆ 25— ರಷ್ಯಾವು ಟರ್ಕೀ ಮೇಲೆ ಆಕ್ರಮಣ ಕಾರ್ಯವನ್ನು ಏಪ್ರಿಲ್ ತಿಂಗಳಲ್ಲಿ ನಡೆಸುವುದೆಂದು ಡ್ರು ಪಿಯರ್ಸನರು ಆಕಾಶವಾಣಿ ಭಾಷಣದಲ್ಲಿ ಭವಿಷ್ಯ ನುಡಿದಿರುವರು.

ಯುದ್ಧಾನಂತರ

ಪ್ರಪಂಚವು ಮತ್ತೊಂದು ಮಹಾ ಸಂಗ್ರಾಮದ ಕಡೆ ಪ್ರಯಾಣ ಮಾಡುತ್ತಿದೆ. ಈ ಪ್ರಯಾಣವು ವೇಗ ನಮ್ಮ ನಮ್ಮ ಕಣ್ಣಿಗೆ ಕಾಣಬರದಂಥಾದ್ದು; ಊಹೆಗೆ ಏನಾದ್ದು; ವಾಯುವೇಗ ಮನೋವೇಗಗಳಾಗಿವೆ| ಆಟಂ ಬಾಂಬು ರಹಸ್ಯವನ್ನು ಮಿತ್ರರಾಜ್ಯಗಳವರು ತಮ್ಮಲ್ಲಿಯೇ ಇಟ್ಟುಕೊಂಡಿರಲು ಯತ್ನಿಸಿದರೂ, ಯಾರೋ ಒಬ್ಬನು (ರಷ್ಯರೇ ಇರಬಹುದು) ತಮ್ಮ ಗೂಢಚಾರರ ಮುಖಾಂತರ ವಿಷಯವನ್ನು ಅರಿತುಕೊಂಡಿರುವರಂತೆ, ಈ ವಿಷಯದಲ್ಲಿ ತೀವ್ರವಾಗಿ ವಿಚಾರಣೆಗಳು ನಡೆಯುತ್ತಿವೆ.

ಇದು ಹೀಗಿರುವಾಗ ಪ್ರಪಂಚವನ್ನೆಲ್ಲಾ ಒಂದು ಮಹಾ ಕ್ಷಾಮವು ಕಾದುಕೊಂಡು ಕೂತಿದೆ :-100 ಕೋಟಿ ಮಂದಿಗೆ ಈ ವರ್ಷ ಆಹಾರದ ಕೊರತೆ ಏರ್ಪಟ್ಟಿರುವದೆಂದೂ, ಅದಕ್ಕಾಗಿ ಕೊನೆಯ ಪಕ್ಷ 50 ಲಕ್ಷ ಟನ್ನುಗಳ ಅಕ್ಕಿಯು ಅವಶ್ಯಕವೆಂದೂ ಪ್ರಪಂಚ ಭದ್ರತಾ ಸಂಘದವರು ಅಂದಾಜು ಹಾಕಿರುವರು. ನಮ್ಮ ಭಾರತ ದೇಶದಲ್ಲಿಯೇ ಈ ವರ್ಷ 70 ಲಕ್ಷ ಟನ್ನುಗಳ ಆಹಾರ ಪದಾರ್ಥಗಳ ಕೊರತೆ ಇರುವುದಂತೆ.

ಇಂಡೋನೇಷಿಯಾ ಹೋರಾಟವು ಸ್ವಲ್ಪ ತಗ್ಗಿದೆ. ಡಚ್ಚರು ಕೆಲವು ಅನುಕೂಲಗಳನ್ನು ಕಲ್ಪಿಸುವದಾಗಿ ಹೇಳುತ್ತಿರುವರು. ತೀವ್ರವಾದಿಗಳು ಸಂಪೂರ್ಣ ಸ್ವರಾಜ್ಯವೇ ಬೇಕೆನ್ನುತ್ತಿರುವರು. ಅದಕ್ಕಾಗಿ ಆಂದೋಳನ ಮಾಡುತ್ತಿರುವರು. ಡಚ್ಚರಿಗೆ ತಮ್ಮ ಹಿಡಿತವನ್ನು ಬಿಡಲು ಇಷ್ಟವಿಲ್ಲ

ಪಶ್ಚಿಮವು ಪೂರ್ವದೊಂದಿಗೆ ರಾಯಭಾರ ನಡೆಸುತ್ತಿದೆ. ಫಲವೇನಾಗುವುದೋ ಮುಂದೆ ನೋಡಬೇಕು.

ಚೀನಾಕ್ಕೆ ಸೇರಿದ ಮಂಚೂರಿಯಾದಲ್ಲಿ ಪುನಃ ಗಲಭೆಗಳು ಆಗುತ್ತಿವೆ. ಚೀನಾದಲ್ಲಿ ಅಮೇರಿಕನ್ನರು ಇರುವವರೆಗೂ, ರಷ್ಯನ್ನರು ಮಂಚೂರಿಯವನ್ನು ಬಿಟ್ಟು ಹೋಗಲು ಒಪ್ಪಲಾರರು. ಮುಂದೆನಾಗುವುದೋ ನೋಡಬೇಕು!

ಕೈರೊ ಫೆ 26— ಹಲವು ಸಹಸ್ರ ಮಂದಿ ವಿದ್ಯಾರ್ಥಿಗಳು ಸಭೆ ನಡೆಸಿ, ಬ್ರಿಟಿಷ್ ಸಾಮಾಜ್ಯಶಾಹಿಯ ಮೇಲೆ ಸಂಗ್ರಾಮ ಘೋಷಿಸಬೇಕೆಂದೂ, ಬ್ರಿಟಿಷ್ ವಸ್ತುಗಳಿಗೆ, ಇಂಗ್ಲೀಷು ಭಾಷೆಗೆ ಬಹಿಷ್ಕಾರ ಹಾಕಬೇಕೆಂದೂ ಠರಾವು ಮಾಡಿದರು.

ಬ್ರಿಟಿಷರನ್ನು ಹೊರಗಿಡಿರಿ

ಮುಂದಿನ ಹತ್ತು ವರ್ಷಗಳ ವರೆಗೆ, ಯುನಾಯಿಟೆಡ್ ಸ್ಟೇಟ್ಸ್ ಆಫ್ ಅಮೆರಿಕಾದಲ್ಲಿ ಬ್ರಿಟಿಷ್ ಹಾಗು ಇತರ ಯುರೋಪಿಯನ್ನರನ್ನು ಬಂಗೊಡಬಾರದೆಂದೂ ಅವರನ್ನು ಹೊರಗೇ ದೂಡಬೇಕೆಂದೂ ಅಮೇರಿಕನ್ನರ ಹಳೇ ಸಿಪಾಯಿಗಳಿಂದ ಬೇಡಿಕೊಳ್ಳಲಾಗಿದೆಯಂತೆ.

ಆಫ್ಘನರ ಹರೋಡೆ

ಕಟಕ್ ಜಿಲ್ಲೆಯಲ್ಲಿ ಸಾಲೇಪುರ ಎಂಬ ಹಳ್ಳಿಯಲ್ಲಿ ಇಲಿ ಕಡಿಗೆ ದರೋಡೆ ಮಾಡಿದ ಸಂಬಂಧದಲ್ಲಿ ಜೋನಾಪುರ ವೆಂಬ ಹಳ್ಳಿಯಲ್ಲಿ ಸುಮಾರು 12 ಮಂದಿ ಆಫ್ಘನರು ಬಂಧಿಸಲ್ಪಟ್ಟಿದ್ದಾರೆ. ಅವರ ಹತ್ತಿರ 10 ಸಾವಿರ ರೂ. ಬೆಲೆಯ ಆಭರಣಗಳು ಸಿಕ್ಕಿವೆ. ಹಿಂದಕ್ಕೆ ಕಾಬೂಲಿ ಜನರು ಸಾಲೆಪುರದ ಒಬ್ಬ ಶ್ರೀಮಂತನ ಮನೆಯಲ್ಲಿ ದರೋಡೆ ಮಾಡಿ ಸುಮಾರು 1 ಲಕ್ಷ ರೂ. ಬೆಲೆಯ ಆಭರಣಗಳನ್ನು ಕಳವು ಮಾಡಿದ್ದರಂತೆ.

॥ ವಂದೇಮಾತರಂ ॥

ಶ್ರೇಷ್ಠವಾದ

ರಾಜಪುರಿ ಹೊಗೇಸೊಪ್ಪಿನಿಂದ

— ತಯಾರಿಸಲ್ಪಟ್ಟ —

ಕಾಂಗ್ರೆಸ್

(ರಿಜಿಸ್ಟರ್ಡ್)

ಮಂಗಳೂರು

ಬೀಡಿಗಳು

ಜೆ. ಎಸ್. ಟೊಬ್ಯಾಕೊ ವರ್ಕ್ಸ್

ಬಸ್ ಟರ್ಮಿನಸ್ ಮೈಸೂರು

ಸುಭಾಷ್

ರವರ

ಜೀವನ ಚರಿತ್ರೆ

ಹುಟ್ಟಿದ್ದು, ಬೆಳೆದದ್ದು, ದೇಶಕ್ಕಾಗಿ ಸತತವೂ ದುಡಿದದ್ದು, ಇಂದು ಸಾಧಿಸಿದ್ದು ಎಲ್ಲವನ್ನೂ ಸಂಗ್ರಹಿಸಿ ಕೊಡಲಾಗಿದೆ.

ಅಂದು ಬಾಬು —

— ಇಂದು ನೇತಾಜಿ

ಬರೆದವರು "ಕಾಂತ್"

ಸಾಹಿತ್ಯ ಮಂದಿರ

ಜಗನ್ಮೋಹನ ಬಂಗ್ಲೆ ರಸ್ತೆ

ಮೈಸೂರು

ಬೀಹಾರಿಗೆ ಪ್ರಥಮ ಸ್ಥಾನ

ಈಗಲ ಸುಮಾರು 50 ಲಕ್ಷ ಜನರು ಕಾಂಗ್ರೆಸ್ ಸಭಾಸದರಾಗಿದ್ದಾರೆ. ಬಿಹಾರ ಪ್ರಾಂತ್ಯಕ್ಕೆ ಪ್ರಥಮ ಸ್ಥಾನ ಸಿಕ್ಕಿದೆ. ಈ ಪ್ರಾಂತದಲ್ಲಿ 1120, 980 ಜನರು ಕಾಂಗ್ರೆಸ್ ಸಭಾಸದರಾಗೆರುವರು, ಎಂದು ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿ ಕಛೇರಿ ಕಾರ್ಯದರ್ಶಿಯಾದ ಸಾದಿಕಅಲಿಯವರು ಒಂದು ಪ್ರಕಟನೆ ಹೊರಡಿಸಿದ್ದಾರೆ.

ಪ್ರತಿಬಂಧಕಾಜ್ಞೆ

ಜಬ್ಬಲ್ಪುರದಲ್ಲಿ ಹಲವು ಮಂದಿ ಸಿಪಾಯಿಗಳು ಮುಷ್ಕರ ನಡೆಸುತ್ತಿರುವುದರಿಂದ, ಅಲ್ಲಿನ ಕೆಲವು ಕಡೆಗಳಿಗೆ ಮಿಲಿಟರಿಯವರು ಬರಬಾರದೆಂದು ಮ್ಯಾಜಿಸ್ಟ್ರೇಟರು ಆಜ್ಞೆ ಹೊರಡಿಸಿದ್ದಾರೆ.

ಹಸಕ ಬೆಟ್ಟದಪುರದ

ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟಿ & ಸನ್ಸ್

ಶಿವರಾಂಪೇಟೆ ಮೈಸೂರು.

At Opera —

4 ನೇ ವಾರ

ಪರಂಜ್ಯೋತಿ

ಎ. ಎ. ಚೆಲ್ಲಪ್ಪ ಸಿ. ಪಿ. ರಾಜಲಕ್ಷ್ಮಿ

ಬಾಲ ಸುಬ್ರಹ್ಮಣ್ಯಂ ಒಯಗೌರಿ

ಕೃಷ್ಣ. ಮಧುರಂ ಪಾತ್ರದಾರರು

ಮುಂದಿನ ವಿನೋದ

ಸುರೇಂದ್ರ, ಮೇಹತಾಬ್

ಪಾತ್ರವಹಿಸಿರುವ

ವಿಶ್ವಾಸ್

At Ranjit

From 1–3–46

Vijay Laxmi

ಶೋಭನ ಸಮರ್ಥ

ಮೋತಿಲಾಲ್

ಮುಂತಾದವರು ಪಾತ್ರವಹಿಸಿರುವ

ವಿಜಯಲಕ್ಷ್ಮಿ

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸೇರು ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಂಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣಿ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಅಲ್ಪ ವ್ಯಯದ ಕಾಯಕಲ್ಪ

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಸಂಜೀವನ

ಶಕ್ತಿಸುಧಾ

ಬೆಲೆ ಡಬ್ಬಿಗೆ ರೂ. ೧.೮-೦

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು

ಸತ್ಯವಾದಿ

ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ಏಜಂಟರು ಬೇಕಾಗಿದ್ದಾರೆ. ವಿಷಯಗಳಿಗೆ ಬರೆಯಿರಿ ಅಂಚೆ ವೆಚ್ಚ ಸೇರಿ ಪರಸ್ಥಳಕ್ಕೆ 1-12-0

ಮ್ಯಾನೇಜರ್, ಸತ್ಯವಾದಿ

ಚಾಮರಾಜಪುರಂ, ಮೈಸೂರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore